ಆ) ವರ್ಷ	ಮೆಟ್ರಿಕ್‌ಪೂರ್ವ ಅನುದಾನಿತ ವಿದ್ಯಾರ್ಥಿನಿಲಯಗಳು	ಮೆಟ್ರಿಕ್‌ನಂತರದ ವಿದ್ಯಾರ್ಥಿ ನಿಲಯಗಳು
೧೯೮೩–೮೪	೭	೧೪
೧೯೮೪–೮೫	೨೧	೨೦
೧೯೮೫–೮೬	೧೨	೧೬

ತುಂಗಭದ್ರ ಅಣೆಕಟ್ಟಿನ ನೀರಿನ ಸಂಗ್ರಹದ ಬಗ್ಗೆ

೧೫೪೭. ಶ್ರೀ ಕೆ. ವಿ. ರವೀಂದ್ರ ನಾಥ ಬಾಬು (ಕೊಟ್ಟೂರು), ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಂಗಭದ್ರಾ ಅಣೆಕಟ್ಟಿನ ನೀರಿನ ಸಂಗ್ರಹಣಾ ಸಾಮರ್ಥ್ಯವೆಷ್ಟು?

ಆ) ಜಲಾಶಯದಲ್ಲಿ ಹೂಳು ತುಂಬಿದ ನಂತರ ಹಾಲಿ ನೀರಿನ ಸಂಗ್ರಹಣಾ ಸಾಮರ್ಥ್ಯ ವೆಷ್ಟು?

ಇ) ತುಂಗಭದ್ರಾ ಜಲಾಶಯದಿಂದ ಹೂಳು ತುಂಬಿರುವ ನಂತರ ಕರ್ನಾಟಕ ಹಾಗೂ ಆಂಧ್ರ ಪ್ರದೇಶಕ್ಕೆ ನೀರನ್ನು ವಿತರಣೆ ಮಾಡಲು ಪರಿಗಣಿಸುವ ಸಂಗ್ರಹಣಾ ಸಾಮರ್ಥ್ಯ ವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ತುಂಗಭದ್ರಾ ಅಣೆಕಟ್ಟು ೧೯೫೩ನೇ ಇಸವಿಯಲ್ಲಿ ಪೂರ್ಣಗೊಂಡಾಗ ಗರಿಷ್ಠ ಶೇಖರಣಾ ಸಾಮರ್ಥ್ಯ ೧೩೩ ಟಿ. ಎಂ. ಸಿ.

ಆ) ೧೯೮೧ನೇ ಇಸವಿಯಲ್ಲಿ ನಡೆಸಿದ ಸಮೀಕ್ಷಾ ವರದಿ ಪ್ರಕಾರ ಗರಿಷ್ಠ ಶೇಖರಣಾ ಸಾಮರ್ಥ್ಯ ೧೧೫.೬೮ ಟಿ.ಎಂ.ಸಿ.

ಇ) ಆ) ದಲ್ಲಿರುವಂತೆ.

ಅಂಗನವಾಡಿ ಕ್ಷೇತ್ರದಲ್ಲಿ ಮಹಿಳಾ ಮಂಡಳಿಗಳನ್ನು ಸ್ಥಾಪಿಸುವ ಬಗ್ಗೆ.

೧೫೩೦ ಶ್ರೀ. ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) ಮಾನ್ಯ(ಸಮಾಜ ಕಲ್ಯಾಣ ಸಚಿವರು).—ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೬ನೇ ಇಸ್ವಿಯಲ್ಲಿ ಕೇಂದ್ರ ಸರ್ಕಾರವು ಪ್ರತಿ ಹಳ್ಳಿಯಲ್ಲಿ ಅಥವಾ ಅಂಗನವಾಡಿ ಕ್ಷೇತ್ರದಲ್ಲಿ ಮಹಿಳಾ ಮಂಡಳಿಗಳನ್ನು ಸ್ಥಾಪಿಸಲು ಆದೇಶ ನೀಡಿದ್ದು ನಿಜವೆ?

ಆ) ಈ ಆದೇಶದ ಪ್ರಕಾರ ರಾಜ್ಯದಲ್ಲಿ ಸ್ಥಾಪಿಸಿದ ಮಹಿಳಾ ಮಂಡಳ ಸಂಖ್ಯೆ ಎಷ್ಟು?

ಇ) ಕೇಂದ್ರ ಸರ್ಕಾರವು ಈ ಮಹಿಳಾ ಮಂಡಳಿಗಳಿಗೆ ಪ್ರತಿ ಮಂಡಳಿಗೆ ಒಂದು ಸಾವಿರ ರೂಪಾಯಿಯಂತೆ ಆನಾವರ್ತ ಸಹಾಯಧನ ಕೊಡಬೇಕೆಂದು ಮತ್ತು ಈ ಖರ್ಚನ್ನು ಸಮಗ್ರ ಬಾಲವಿಕಾಸ ಯೋಜನೆಗೆ ನಿಗದಿಪಡಿಸಿದ ಆಯವ್ಯಯದಲ್ಲಿ ನಿಭಾಯಿಸಬೇಕೆಂದು ಆದೇಶ ನೀಡಿದ್ದು ನಿಜವೇ?

ಈ) ೧೯೮೬ ರಿಂದ ಇಲ್ಲಿಯವರೆಗೆ ಇಂತ ಮಹಿಳಾ ಮಂಡಳಿಗಳನ್ನು ಸ್ಥಾಪಿಸಲು ಖರ್ಚಾದ ಹಣ ಎಷ್ಟು?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು)

ಅ) ಹೌದು.

ಆ) ರಾಜ್ಯದಲ್ಲಿ ಇದುವರೆಗೆ ೨,೯೨೧ ಮಹಿಳಾ ಮಂಡಳಿಗಳು ಸ್ಥಾಪಿತವಾಗಿವೆ.

ಇ) ಹೌದು.

ಈ) ಇದುವರೆಗೆ ೩೭೬ ಮಹಿಳಾ ಮಂಡಳಿಗಳಿಗೆ ೩,೭೬,೦೦೦–೦೦ ರೂ. ಗಳನ್ನು ಮಂಜೂರು ಮಾಡಲಾಗಿದೆ. ಬಾಲ ವಿಕಾಸ ಯೋಜನಾಧಿಕಾರಿಗಳ ಶಿಫಾರಸ್ಸಿನೊಡನೆ ಮನವಿಗಳು ಬಂದಂತೆ ಉಳಿದ ಮಹಿಳಾ ಮಂಡಳಿಗಳಿಗೆ ಅನುದಾನ ಮಂಜೂರು ಮಾಡಲಾಗುವುದು.

ಪ್ರಾಮಾಣಿತ ಶಾಲೆಗೆ ಪ್ರತ್ಯೇಕವಾದ ಕಟ್ಟಡವನ್ನು ಒದಗಿಸುವ ಬಗ್ಗೆ.

೧೦೯೨. ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ)ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಪುತ್ತೂರು ಗ್ರಾಮದಲ್ಲಿ ಕಟ್ಟಲಾಗುತ್ತಿರುವ ಮಹಿಳೆಯರ ರಾಜ್ಯ ಗೃಹದ ಕಟ್ಟಡದ ಪಕ್ಕದಲ್ಲಿರುವ ಖಾಲಿ ಜಾಗದಲ್ಲಿ ಪ್ರಾಮಾಣಿಕ ಶಾಲೆಗೆ ಪ್ರತ್ಯೇಕವಾದ ಕಟ್ಟಡವನ್ನು ಒದಗಿಸುವ ವಿಷಯವನ್ನು ಸರ್ಕಾರ ಪರಿಗಣಿಸುವುದೇ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು)

ಅ) ಪರಿಗಣಿಸಲಾಗುವುದು.

ವನ್ಯಮೃಗಾಲಯ ಪ್ರಾಧಿಕಾರದ ಬಗ್ಗೆ.

೬೩೧ ಶ್ರೀಮತಿ ಮುಕ್ತರುನ್ನೀಸಾ ಬೇಗಂ (ನರಸಿಂಹರಾಜ) ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ವನ್ಯಮೃಗಾಲಯ ಪ್ರಾಧಿಕಾರದ ಸದಸ್ಯರುಗಳು ದೇಶದ ಅರಣ್ಯ ಮತ್ತು ವನ್ಯಮೃಗಾಲಯಗಳಿಗೆ ಭೇಟಿ ನೀಡುವ ಪ್ರವಾಸವನ್ನು ಸರ್ಕಾರವು ಅಂಗೀಕರಿಸಿರುವುದೇ ?

೨. ಈ ಪ್ರವಾಸದ ವೆಚ್ಚಕ್ಕಾಗಿ ೧.೦೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ಸತ್ಯಾಂಶವೇ? ಹಾಗಿದ್ದಲ್ಲಿ ರಾಜ್ಯದಿಂದ ಹೊರಗೆ ಅಂತಹ ಪ್ರವಾಸವನ್ನು ಕೈಗೊಳ್ಳಲು ಕಾರಣ ವೇನು?

೩. ಇದೇ ರೀತಿಯ ಪ್ರವಾಸವನ್ನು ಹಿಂದೆ ಏರ್ಪಾಡು ಮಾಡಲಾಗಿತ್ತೇ? ಹಾಗಿದ್ದಲ್ಲಿ, ಆ ಪ್ರವಾಸದಿಂದ ಗಳಿಸಿರುವ ಪ್ರಯೋಜನವೇನು?

ಶ್ರೀ ಬಿ. ಎ. ಜೀವಿಜಯ (ಅರಣ್ಯರಾಜ್ಯಸಚಿವರು).—

೧. ಇಲ್ಲ.

೨. ಇಲ್ಲ.

೩. ಹೌದು. ೧೯೮೨ನೆ ವರ್ಷದಲ್ಲಿ ಏರ್ಪಾಡು ಮಾಡಲಾಗಿತ್ತು. ದೆಹಲಿ, ಕಲ್ಕತ್ತಾ ಮತ್ತು ಗೌಹಾತಿ ವನ್ಯಮೃಗಾಲಯಗಳೊಂದಿಗೆ ಪ್ರಾಣಿ ವಿನಿಮಯವನ್ನು ಮಾಡಿಕೊಂಡಿದ್ದು, ಈ ಮೃಗಾಲಯದಲ್ಲಿ ಇಲ್ಲದಿರುವ ಪ್ರಾಣಿಗಳನ್ನು ತರಿಸಲಾಗಿದೆ.

Regarding Conversion of Bangalore Miraj Railway track into Broad-Guage.

1024. Sri Smt. LEELADEVI R. PRASAD (Athauni).—Will the Minister for Public works commend area Develotment and Irrigation be pleased to State?